# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1215 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 07/03/2022 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು. |

************

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಐ.ಟಿ.ಐ. ತರಬೇತಿ ಸಂಸ್ಥೆಗಳ ಸಂಖ್ಯೆ ಎಷ್ಟು; ಸದರಿ ಐ.ಟಿ.ಐ.ಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು) | ಸರ್ಕಾರಿ ಐ.ಟಿ.ಐ.ಗಳ ಸಂಖ್ಯೆ 270 ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ 3656 (ವೃಂದವಾರು ವಿವರಗಳನ್ನು **ಅನುಬಂಧ–1** ರಲ್ಲಿ ಒದಗಿಸಿದೆ)<br>ಅನುದಾನಿತ ಐ.ಟಿ.ಐ.ಗಳ ಸಂಖ್ಯೆ 192 ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ 293 (ವೃಂದವಾರು ವಿವರಗಳನ್ನು **ಅನುಬಂಧ–2** ರಲ್ಲಿ ಒದಗಿಸಿದೆ) |
| ಆ) | ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿಳಂಬ ಉಂಟಾಗಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು; | (1) ಕಿರಿಯ ತರಬೇತಿ ಅಧಿಕಾರಿ ಹುದ್ದೆಗಳ ಆಯ್ಕೆ ಸಂಬಂಧ ಕರ್ನಾಟಕ ಲೋಕಸೇವಾ ಆಯೋಗವು ಪ್ರವೇಶ ಪರೀಕ್ಷೆ ನಡೆಸಿ, ಸೇವಾ ಅನುಭವ ಪ್ರಮಾಣ ಪತ್ರಗಳನ್ನು ಪರಿಶೀಲಿಸಲು ಸಮಯಾವಕಾಶ ಹಿಡಿದಿರುವುದರಿಂದ ಕಿರಿಯ ತರಬೇತಿ ಅಧಿಕಾರಿ ಹುದ್ದೆಗಳ ಆಯ್ಕೆಯಲ್ಲಿ ತಡವಾಗಿರುತ್ತದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿ ಸ್ವೀಕೃತಗೊಂಡ 03 ತಿಂಗಳೊಳಗೆ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿ ಭರ್ತಿ ಮಾಡಲಾಗುವುದು.<br><br>ಈಗಾಗಲೇ ಆಡಳಿತಾಧಿಕಾರಿ, ಕಚೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಶೀಘ್ರಲಿಪಿಗಾರರ ಹುದ್ದೆಗಳಿಗೆ ಮುಂಬಡ್ತಿ ಮುಖಾಂತರ ಭರ್ತಿ ಮಾಡಲಾಗಿದೆ. ತರಬೇತಿ ಅಧಿಕಾರಿ ಹುದ್ದೆಗೆ ಸದ್ಯದಲ್ಲೇ ಅರ್ಹ ಅಭ್ಯರ್ಥಿಗಳಿಗೆ ಮುಂಬಡ್ತಿ ನೀಡಿ ಭರ್ತಿ ಮಾಡಲಾಗುವುದು.<br><br>(2) ಖಾಸಗಿ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ನಿಯಮಾನುಸಾರ ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತಿ ಪಡೆದು ಅನುದಾನ ಸಂಹಿತೆಯ ನಿಯಮಾನುಸಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮವಹಿಸಲಾಗುವುದು. |
| ಇ) | ಕೆ.ಪಿ.ಎಸ್.ಸಿ ಮೂಲಕ ಕಿರಿಯ ತರಬೇತಿ ಅಧಿಕಾರಿ ಹುದ್ದೆಗಳ (ಜೆ.ಟಿ.ಒ) ಭರ್ತಿ ಮಾಡಬೇಕಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; | ಕಿರಿಯ ತರಬೇತಿ ಅಧಿಕಾರಿ ಹುದ್ದೆಗಳ ಸಂಖ್ಯೆ: 1520 |

| | | |
|---|---|---|
| ಈ) | ಸದರಿಯವರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆಯೇ; ಯಾವ ಕಾಲಮಿತಿಯಲ್ಲಿ ನೇಮಕಾತಿ ಆದೇಶ ನೀಡಲಾಗುವುದು? | ಕರ್ನಾಟಕ ಲೋಕಸೇವಾ ಆಯೋಗದಿಂದ 1520 ಕಿರಿಯ ತರಬೇತಿ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, 46 ಕಿರಿಯ ತರಬೇತಿ ಅಧಿಕಾರಿಗಳ ಅಂತಿಮ ಆಯ್ಕೆಪಟ್ಟಿ ಇಲಾಖೆಯಲ್ಲಿ ಸ್ವೀಕೃತಗೊಂಡಿದ್ದು, ಸದ್ಯದಲ್ಲೇ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು.<br><br>ಕರ್ನಾಟಕ ಲೋಕಸೇವಾ ಆಯೋಗವು 1296 ಕಿರಿಯ ತರಬೇತಿ ಅಧಿಕಾರಿಯವರ ತಾತ್ಕಾಲಿಕ ಪಟ್ಟಿ ಪ್ರಕಟಿಸಿದ್ದು, ಅಂತಿಮ ಆಯ್ಕೆ ಪಟ್ಟಿ ಕಳುಹಿಸಲಾಗುವುದೆಂದು ತಿಳಿಸಿರುತ್ತಾರೆ. ಅಂತಿಮ ಆಯ್ಕೆ ಪಟ್ಟಿ ಸ್ವೀಕೃತಗೊಂಡ ನಂತರ ಮೂಲ ದಾಖಲೆಗಳನ್ನು ಪರಿಶೀಲಿಸಿಕೊಂಡು ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿ ಖಾಲಿ ಇರುವ ಕಿರಿಯ ತರಬೇತಿ ಅಧಿಕಾರಿಗಳ ಹುದ್ದೆಗಳಿಗೆ ನಿಯುಕ್ತಿಗೊಳಿಸಲಾಗುವುದು. |

**ಸಂಖ್ಯೆ: ಕೌಉಜೀಇ 24 ಕೈತಪ್ರ 2022**

(ಡಾ.ಸಿ.ಎನ್.ಅಶ್ವತ್ಥ ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

## ಅನುಬಂಧ-1

| STAFF POSITION OF THE COMMISSIONARATE OF INDUSTRIAL TRAINING AND EMPLOYMENT (TRAINING WING) | | | | |
|---|---|---|---|---|
| **Sl.No.** | **DESIGNATION** | **NO OF POSTS SANCTIONED** | **NO OF POSTS FILLED** | **NO OF POSTS VACANT** |
| **1** | **2** | **3** | **4** | **5** |
| | **GROUP-A** | | | |
| 1 | Director | 1 | 1 | 0 |
| 2 | Additional Director (SPIU) | 1 | 0 | 1 |
| 3 | Joint Director of Training | 8 | 8 | 0 |
| 4 | Deputy Director (Trg)/ Principal Grade-1 | 55 | 30 | 25 |
| 5 | Assistant Director (ADM) | 1 | 1 | 0 |
| 6 | Assistant Director (ACC) | 1 | 1 | 0 |
| | **TOTAL** | **67** | **41** | **26** |
| | **GROUP-B** | | | |
| 7 | Principal Grade-2/Vice principal/Assistant Director (Trg)/Assistant Apprenticeship Adviser | 240 | 142 | 98 |
| 8 | Administrative Officer | 57 | 25 | 32 |
| | **TOTAL** | **297** | **167** | **130** |
| | **GROUP-C** | | | |
| 9 | Training Officer | 238 | 63 | 175 |
| 10 | Junior Training Officer | 3048 | 1391 | 1667 |
| 11 | Superintendent | 184 | 139 | 45 |
| 12 | First Division Assistant | 625 | 328 | 297 |
| 13 | Second Division Assistant | 292 | 219 | 73 |
| 14 | Stenographer | 18 | 9 | 9 |
| 15 | Typist | 134 | 17 | 117 |
| 16 | Driver | 17 | 7 | 10 |
| | **TOTAL** | **4556** | **2173** | **2393** |
| | **GROUP-D** | | | |
| 17 | Workshop Attender | 420 | 15 | 405 |
| 18 | Jammedar/ Attenders/Peons | 747 | 149 | 598 |
| 19 | Helper | 100 | 0 | 100 |
| | **TOTAL** | **1267** | **164** | **1103** |
| | **GRAND TOTAL** | **6187** | **2531** | **3656** |

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ

## ಅನುಬಂಧ-2

### ಖಾಸಗಿ ಅನುದಾನಿತ ಐ.ಟಿ.ಐ ಸಂಸ್ಥೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳ ವೃಂದವಾರು ವಿವರ:

| ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ |
|---|---|
| **ಗ್ರೂಪ್-ಬಿ** | |
| ಪ್ರಾಚಾರ್ಯರು | 45 |
| **ಗ್ರೂಪ್-ಸಿ** | |
| ತರಬೇತಿ ಅಧಿಕಾರಿ | 17 |
| ಕಿರಿಯ ತರಬೇತಿ ಅಧಿಕಾರಿ | 135 |
| ಕಚೇರಿ ಅಧೀಕ್ಷಕರು | 32 |
| ಪ್ರಥಮ ದರ್ಜೆ ಸಹಾಯಕರು | 39 |
| ದ್ವಿತೀಯ ದರ್ಜೆ ಸಹಾಯಕರು | 25 |
| **ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ** | **293** |

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ